ಕನ್ನಡದ ತರುಣ ಲೇಖಕರಿಂದ 'ತಮ್ಮ ಕೃತಿಗಳ ವಿಮರ್ಶೆಯಾಗುತ್ತಿಲ್ಲ' ಎನ್ನುವ ಮಾತು ಆಗಾಗ ಕೇಳಿಬರುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಕೇಳಲಾದ 'ಮಯೂರ'ದ ಪ್ರಶ್ನೆಗಳಿಗೆ ಮಾರ್ಚ್ ಸಂಚಿಕೆಯಲ್ಲಿ ಯುವ ಲೇಖಕರ ಹಾಗೂ ಮೇ ಸಂಚಿಕೆಯಲ್ಲಿ ಓದುಗರ ಪ್ರತಿಕ್ರಿಯೆಗಳು ಪ್ರಕಟವಾಗಿದ್ದವು. ಇದರ ಮುಂದುವರಿದ ಭಾಗವಾಗಿ ಕನ್ನಡದ ಇಬ್ಬರು ವಿಮರ್ಶಕರು ನಮ್ಮ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ್ದಾರೆ. ಈ ಬರಹಗಳೊಂದಿಗೆ ಇದು, 'ವಿಮರ್ಶೆ ಯಾಕೆ? ಯಾರಿಗೆ?' ಮಾಲಿಕೆ ಕೊನೆಗೊಳ್ಳುತ್ತದೆ.

# ಪ್ರಶ್ನೆಗಳು

1 ಯುವಲೇಖಕರು ಮತ್ತು ಯಾವುದೇ ಲೇಖಕರು ತಮ್ಮ ಕೃತಿಗಳಿಗೆ ವಿಮರ್ಶೆ ಬರುತ್ತಿಲ್ಲ ಎಂದು ದೂರುವುದು ಸರಿಯೇ? ಈ ದಿಸೆಯಲ್ಲಿ ನಿಮ್ಮ ನಿಲುವು ಏನು? ಇದು ಕನ್ನಡ ಲೇಖಕರಿಗೆ ಮಾತ್ರ ಸೀಮಿತವಾದ ಗೊಣಗಾಟವೇ?

2 ಒಂದು ಕೃತಿಯನ್ನು ವಿಮರ್ಶೆಗೆ ಎಂದು ಕೈಗೆತ್ತಿಕೊಳ್ಳುವ ಮುನ್ನ ಅನುಸರಿಸುವ ನಿಮ್ಮದೇ ಆದ ಮಾನದಂಡಗಳೇನು?

3 ವಿಮರ್ಶೆ ಎಂದರೆ ತಮ್ಮ ಕೃತಿಗೆ ಸಿಗಬೇಕಾದ ಪ್ರೋತ್ಸಾಹ, ಅದು ತಮ್ಮ ಸಾಹಿತ್ಯವನ್ನು ಪೊರೆಯುವ ರೀತಿ, ಅದೊಂದು ಪ್ರಚಾರ, ಕೀರ್ತಿವಂತರಾಗಲು ಇರುವ ದಾರಿ ಎಂದು ಬಹುಪಾಲು ಲೇಖಕರು ಭಾವಿಸಿದ್ದಾರೆ. ಇದನ್ನು ನೀವು ನೋಡುವ ಬಗೆ ಯಾವ ರೀತಿಯದು?

4 ಸಾಹಿತ್ಯ ವಿದ್ಯಾರ್ಥಿಯಾಗಿ ವಿಮರ್ಶೆಯಲ್ಲಿ ಕೊನೆಗೂ ಮುಖ್ಯವಾಗುವುದು ಏನು? ವಿಮರ್ಶಕರಿಂದ ತಮ್ಮ ಕೃತಿಗಳ ವಿಮರ್ಶೆ ಬರಲೇಬೇಕು ಎಂದು ಲೇಖಕರು ಹಕ್ಕೊತ್ತಾಯ ಮಾಡುವುದು ಲೇಖಕರ ಅಸೂಕ್ಷ್ಮತೆಯನ್ನು, ಅಭ್ಯಾಸದ ಕೊರತೆಯನ್ನು ತೋರುತ್ತದೆಯೇ? ಅಥವಾ ಅದನ್ನು ಮನುಷ್ಯ ಸಹಜ ಪ್ರಕ್ರಿಯೆಯಾಗಿ ನೋಡಬೇಕೆ?

5 ನೀವು ಯಾರನ್ನು (ಓದುಗ, ಲೇಖಕ) ದೃಷ್ಟಿಯಲ್ಲಿಟ್ಟುಕೊಂಡು ಬರೆಯುತ್ತೀರಿ? ಕಡೆಗೂ ತಮ್ಮ ಕೃತಿಗಳಿಗೆ (ಬೇರೆಯವರ ಕೃತಿಗಳಿಗೆ ಅಲ್ಲ!) ವಿಮರ್ಶೆ ಬರುತ್ತಿಲ್ಲ ಎಂದು ಮುನಿಸಿಕೊಳ್ಳುವ ಲೇಖಕರಿಗೆ ಹೇಳಬಹುದಾದ ಕಿವಿಮಾತು (ಅಥವಾ ಹಿತವಚನ!) ಏನು?